# ಅಧ್ಯಾತ್ಮ ಪತ್ರಿಕೆಗಳು ಮತ್ತು ಆಧುನಿಕ ಸಮಾಜ

ವಿ. ರಘು

'**ಅಧ್ಯಾತ್ಮ** ಮತ್ತು ಮಾಧ್ಯಮ' – ಇದು ಚಿಂತನೆಗೆ ಸೊಗಸಾದ ವಿಚಾರ. ಆದರೆ ಈ ವಿಚಾರವಾಗಿ ಭಾಷಣ ಮಾಡುವುದಾಗಲಿ, ಪ್ರಬಂಧ ಮಂಡಿಸುವುದಾಗಲಿ ಅಥವಾ ಲೇಖನ ರಚಿಸುವುದಾಗಲಿ ಸುಲಭಸಾಧ್ಯ ಕಾರ್ಯವಲ್ಲ. ಈ ಕ್ಲಿಷ್ಟತೆಗೆ ಕಾರಣ, ಅಧ್ಯಾತ್ಮದ ಉದ್ದೇಶವೇ ಬೇರೆ ಮತ್ತು ಮಾಧ್ಯಮದ ಉದ್ದೇಶವೇ ಬೇರೆ. ಇವೆರಡೂ ವಿರುದ್ಧ ಆಶಯಗಳನ್ನು ಹೊಂದಿವೆ. ಅಧ್ಯಾತ್ಮದ ಉದ್ದೇಶ ಮಾನುಷ ಜೀವನದ ಪರಮೋಚ್ಚ ಗುರಿ, **ಮೋಕ್ಷ**. ಈ ತುರೀಯ ಅನುಭವ (enlightenment) ಇಲ್ಲಿ ಮುಖ್ಯವಾಗುತ್ತದೆ. ಮನರಂಜನೆ, ರೋಚಕತೆ ಇವಾವುದೂ ಅಧ್ಯಾತ್ಮದ ಉದ್ದೇಶವಲ್ಲ. ಮಾಧ್ಯಮದ ಉದ್ದೇಶ, **ಶಿಕ್ಷಣ, ಮನರಂಜನೆ ಮತ್ತು ಅರಿವು** (educate, entertain, enlighten). ಹೀಗಾಗಿ ಅಧ್ಯಾತ್ಮ ಮತ್ತು ಮಾಧ್ಯಮಗಳು ಪರಸ್ಪರ ವಿರುದ್ಧ ಆಶಯಗಳನ್ನು ಹೊಂದಿರುವ ಕಾರಣ ಇವೆರಡನ್ನು ಹೊಂದಿಸುವುದು ಬಹಳ ಕ್ಲಿಷ್ಟ ಕಾರ್ಯ. ಆದರೆ ಇವೆರಡರ ನಡುವೆ ಕಾಣುವ ಏಕೈಕ ಸೂಕ್ಷ್ಮ ಸಾಮ್ಯ ಎಂದರೆ 'ಎನ್‌ಲೈಟನ್' ಮಾಡುವ ವಿಚಾರ.

ಅಧ್ಯಾತ್ಮದ enlightenment ಎಂದರೆ ಅಂತರಂಗದ ಅರಿವು. ಮಾಧ್ಯಮದ ದೃಷ್ಟಿಯ ಎನ್‌ಲೈಟನ್‌ಮೆಂಟ್ ಎಂದರೆ ಬಾಹ್ಯ ವಿಚಾರಗಳಲ್ಲಿ ಅರಿವು ಮೂಡಿಸುವುದು. **ಅಧ್ಯಾತ್ಮದ ವಿಕಾಸ ಒಳಮುಖವಾದರೆ ಮಾಧ್ಯಮದ ಬೆಳವಣಿಗೆ ಹೊರಮುಖ**. ಇಂದಿನ ಧಾರ್ಮಿಕ ಪತ್ರಿಕೆಗಳಿಗೆ ಇವೆರಡನ್ನೂ ಹೊಂದಿಸುವ ಸವಾಲು, ಅನಿವಾರ್ಯತೆ ಇದೆ. ಪತ್ರಿಕೆಯೊಂದರ ಸಂಪಾದಕನಾಗಿ ಈ ಬಗೆಯ ಪತ್ರಿಕೆಗಳು ಎದುರಿಸುವ ಸವಾಲುಗಳತ್ತ ತಮ್ಮ ಗಮನ ಸೆಳೆಯಲಿಚ್ಛಿಸುತ್ತೇನೆ.

ಯಾವುದೇ ಪ್ರಯತ್ನದ ಗುರಿ ಯಶಸ್ಸೇ ಆಗಿದೆ. ಅಧ್ಯಾತ್ಮದ ಯಶಸ್ಸು ಕಾಣುವುದೆಂದರೆ ಮೋಕ್ಷ ಪಡೆಯುವುದು. ಮಾಧ್ಯಮದ ಗುರಿ ಹೆಚ್ಚಿನ ಪ್ರಸಾರ ಸಂಖ್ಯೆ ಪಡೆಯುವುದು. ಅಂದರೆ ಗುರಿಯ ಮಾಪನದಲ್ಲಿಯೂ ಪತ್ರಿಕೆ ಮತ್ತು ಅಧ್ಯಾತ್ಮದ ಮಾರ್ಗಗಳ ಮಾಪಕ ಬೇರೆಬೇರೆಯೇ ಆಗಿರುತ್ತದೆ. ಅಧ್ಯಾತ್ಮದ ಬೆಳವಣಿಗೆ ಹೊರಗಣ್ಣಿಗೆ ಕಾಣದು. ಆದರೆ ಪತ್ರಿಕೆಯ ಬೆಳವಣಿಗೆ ಮುಚ್ಚಿಡಲಾಗದಂಥದ್ದು! ಪತ್ರಿಕೆಯಾದರೆ ಪ್ರಸಾರ ಸಂಖ್ಯೆ, ದೃಶ್ಯಮಾಧ್ಯಮವಾದರೆ **ಟಿ. ಪಿ. ಆರ್**. – ಇವೇ ಮಾಧ್ಯಮದ ಪ್ರಗತಿಯ ಅಳತೆಗೋಲುಗಳು. ಅಧ್ಯಾತ್ಮದ ಉದ್ದೇಶ ಸುಖ, ನೆಮ್ಮದಿ. ಮಾಧ್ಯಮದ ಉದ್ದೇಶ ಹಣ, ಹೆಸರು, ಐಷಾರಾಮ. ಮಾಧ್ಯಮಗಳ ಆರಂಭಿಕ ಆದರ್ಶಗಳು ಹಾರಿಹೋಗಿ ಇಂದು ಅವು ವಾಣಿಜ್ಯ ಉದ್ಯಮಗಳ ಸ್ವರೂಪ ಪಡೆದುಕೊಂಡಿರುವುದನ್ನು ನಾವು ಗಮನಿಸಬಹುದು. **ಅಧ್ಯಾತ್ಮ ಒಂದು ಆದರ್ಶ, ಮಾಧ್ಯಮ ಒಂದು ಪ್ರದರ್ಶನ**.

ವಿ. ರಘು ಅವರು ಬೆಂಗಳೂರಿನ ಆಧ್ಯಾತ್ಮಿಕ ಪತ್ರಿಕೆ 'ವಿವೇಕ ಹಂಸ' ದ ಸಂಪಾದಕರು. ವೃತ್ತಿಯಲ್ಲಿ ಬೆಂಗಳೂರಿನ ಜಯನಗರದ ಬಿ.ಹೆಚ್.ಎಸ್. ಪದವಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರು.

ಈ ಬಗೆಯ ಸವಾಲುಗಳಿವೆ ಎಂದ ಮಾತ್ರಕ್ಕೆ ಪತ್ರಿಕೆಗಳು ಅಧ್ಯಾತ್ಮದಿಂದ ದೂರವಿರಬೇಕು ಮತ್ತು ಅಧ್ಯಾತ್ಮಜೀವಿಗಳು ಪತ್ರಿಕೆ ಓದಬಾರದು ಎಂದೇನಲ್ಲ. ಪತ್ರಿಕೆಗಳಲ್ಲಿ ಒಂದೆರಡು ಕಾಲಂ ಅಧ್ಯಾತ್ಮದ ವಿಚಾರ ಬರುತ್ತದೆ. ಎಂತಹ ರೋಚಕ ಪತ್ರಿಕೆಯಾದರೂ ಅದರಲ್ಲಿ ಅಧ್ಯಾತ್ಮದ ತುಣುಕಾದರೂ ಇರುತ್ತದೆ. ಏಕೆಂದರೆ ಜನ ಮೆಚ್ಚಲು, ಜನರನ್ನು ಮೆಚ್ಚಿಸಲು! ಪತ್ರಿಕೆಗಳಲ್ಲಿ ಒಂದು ಕಾಲಂ ಅಧ್ಯಾತ್ಮ ಪ್ರಕಟಿಸುವುದಕ್ಕೂ, ಆಧ್ಯಾತ್ಮಿಕ ಪತ್ರಿಕೆ ನಡೆಸುವುದಕ್ಕೂ ಅಜಗಜಾಂತರವಿದೆ. ಮೊದಲನೆಯದು ಬರಿಯ ಒಗ್ಗರಣೆಯಾದರೆ ಎರಡನೆಯದು ಇಡೀ ಸಾಂಬಾರು!

ಆಧ್ಯಾತ್ಮಿಕ ಪತ್ರಿಕೆಗಳು ಎದುರಿಸುವ ಸಮಸ್ಯೆಗಳು ಹಲವಾರು. ಇದರಲ್ಲಿ ಮೊದಲನೆಯದು ಪ್ರಸಾರದ ಸಮಸ್ಯೆ. ಇವುಗಳನ್ನು ಜನರು ಹೆಚ್ಚಿನ ಸಂಖ್ಯೆಯಲ್ಲಿ **ಇಷ್ಟಪಟ್ಟು** ಕೊಂಡುಕೊಳ್ಳುವುದಿಲ್ಲವಾದ್ದರಿಂದ ಸಂಪಾದಕರು/ ಪ್ರಕಾಶಕರು **ಕಷ್ಟಪಟ್ಟು** ಮಾರಬೇಕಾಗುತ್ತದೆ. ಅದಕ್ಕಾಗಿ ಚಂದಾ ಮಾಡಿಸುವವರ, ಆಸಕ್ತರ ಬೆನ್ನು ಹತ್ತಬೇಕಾಗುತ್ತದೆ. ಇದು ನಿರಂತರ ಪ್ರಯತ್ನ. ಪತ್ರಿಕೆ ಆರಂಭವಾಗಿ ಹತ್ತಾಗಲಿ, ಐವತ್ತು ವರ್ಷವಾಗಲಿ ಹೆಗಲಿಗೆ ಚೀಲ ಏರಿಸಿ ತ್ರಿವಿಕ್ರಮನಂತೆ ಓದುಗರ, ಚಂದಾದಾರರ ಬೆನ್ನುಬೀಳಲೇಬೇಕು. ಇಲ್ಲವಾದರೆ ಪತ್ರಿಕೆ ಬೇತಾಳನಂತೆ ಮರಕ್ಕೆ ತಗಲಿಕೊಂಡುಬಿಡುತ್ತದೆ. ಇಷ್ಟೆಲ್ಲ ಕಷ್ಟಪಟ್ಟು ಚಂದಾ ಮಾಡಿಸಿದರೂ, ನವೀಕರಣ ಕಾರ್ಯವೂ ನಡೆಯಬೇಕು. ಇಲ್ಲವಾದರೆ ವರ್ಷೇ ವರ್ಷೇ ಓದುಗರ ಸಂಖ್ಯೆ ಕ್ಷೀಣಿಸುವ ಅಪಾಯವಿದೆ. ಹೀಗಾಗಿ ಬೇತಾಳನಿಗಾದರೂ ವಿರಾಮವಿದ್ದೀತು. ಆದರೆ ಧಾರ್ಮಿಕ ಪತ್ರಿಕೆಯ ಸಂಪಾದಕ/ ಪ್ರಕಾಶಕರಿಗೆ ವಿರಾಮ ಇಲ್ಲವೇ ಇಲ್ಲ. ರಾಜಕೀಯ, ಸಿನಿಮಾ, ಕ್ರೀಡೆ, ಇವಾವ ಮಸಾಲೆಗಳೂ ಇಲ್ಲದ 'ಋಷಿಪಂಚಮಿ'ಯಂತಹ ಪತ್ರಿಕೆಗಳಿವು ಎಂದು ಭಾವಿಸುವ ಜನರ ಮಧ್ಯೆ ಇಂತಹ ಆಧ್ಯಾತ್ಮಿಕ ಪತ್ರಿಕೆಗಳು ಬೆಳೆಯಬೇಕಾಗುತ್ತದೆ.

ಓದುಗರ ಕೊರತೆಯ ಸಂಖ್ಯೆ ಸಾಲದೊ ಎಂಬಂತೆ ಕೆಲವು ಆಡಳಿತಾತ್ಮಕ ಸಮಸ್ಯೆಗಳು ಕೂಡ ಇಂತಹ ಪತ್ರಿಕೆಗಳನ್ನು ಕಾಡುತ್ತವೆ. ಒಂದು ಸಣ್ಣ ಪ್ರಸಂಗ ನೆನಪಾಗುತ್ತದೆ. ಪತ್ರಿಕೆಗಳಿಗೆ ಅಂಚೆ ಕಛೇರಿಯಿಂದ ತಾತ್ಸಾರವಿಲ್ಲದ ಸೇವೆ ಪಡೆಯುವುದು ಕೂಡ

ಒಂದು ಸವಾಲು! ೨೦೦೧ ರ ಸಾಲಿನಲ್ಲಿ ಇದ್ದಕ್ಕಿದ್ದಂತೆ ಅಂಚೆ ಇಲಾಖೆ ಒಂದು ಫರ್ಮಾನು ಹೊರಡಿಸಿತು, ಅದೇನೆಂದರೆ "ಆಧ್ಯಾತ್ಮಿಕ ಪತ್ರಿಕೆಗಳು ವರ್ತಮಾನ ಸುದ್ದಿಗಳನ್ನು ಪ್ರಕಟಿಸುವುದಿಲ್ಲವಾದ್ದರಿಂದ, ಅವುಗಳಿಗೆ ನೀಡಿರುವ ಅಂಚೆ ರಿಯಾಯತಿ ಹಿಂಪಡೆಯಲಿದ್ದೇವೆ" ಎಂದು. ಇದು ಆಘಾತಕಾರಿ ಅಂಶ. ಸಮಾಜದ ಹಿತಕ್ಕಾಗಿ, ಸ್ವಸ್ಥ ಮಾನಸಕ್ಕೆ ಬೇಕಾದ ಸಾಂಸ್ಕೃತಿಕ ವಿಚಾರಗಳನ್ನು ನೀಡುವುದು ಅಪ್ರಸ್ತುತ ಎಂಬುದು ಸರ್ಕಾರದ ಅಭಿಪ್ರಾಯ! ಈ ಆದೇಶ ಬದಲಿಸಲು ಬಹುಸಾಹಸ ಪಡಬೇಕಾಯಿತು.

ಇಡೀ ಸಮಾಜದ, ಸರ್ಕಾರದ ಧೋರಣೆ ಹೀಗಿರುವಾಗ ಆಧ್ಯಾತ್ಮಿಕ ಪತ್ರಿಕೆ ನಡೆಸುವ ಔಚಿತ್ಯವೇನು ಎಂಬ ಪ್ರಶ್ನೆ ಕಾಡುತ್ತದಲ್ಲವೆ? ಚಿಂತಕರೊಬ್ಬರು ಹೇಳಿದ್ದಾರೆ, "ಇಂದು ಕ್ರಿಸ್ತನೇನಾದರೂ ಬದುಕಿದ್ದರೆ ಟ್ರಿಬ್ಯೂನ್ ಪತ್ರಿಕೆಯಲ್ಲಿ ಒಂದು ಕಾಲಂ ಕಾದಿರಿಸುತ್ತಿದ್ದ!" ನಿಜ, ಮಾಧ್ಯಮ ಇಂದು ಜನಜೀವನದ ಅವಿಭಾಜ್ಯ ಅಂಗ. ಬೆಳಗಿನ ಕಾಫಿ ಮರೆತರೂ ದಿನಪತ್ರಿಕೆ ಓದುವುದನ್ನು ಜನ ಮರೆಯುವುದಿಲ್ಲ. ರಾತ್ರಿ ಊಟ ಮರೆತರೂ ಸೀರಿಯಲ್ ಮರೆಯವುದಿಲ್ಲ. ಇವರ ಬದುಕಿನಲ್ಲಿ ಮಧ್ಯಾಹ್ನದ ಜೋಂಪಿಗೆ ಮುನ್ನವಾದರೂ ಧಾರ್ಮಿಕ ಪತ್ರಿಕೆಯ ಲೇಖನಗಳು ಜೋಗುಳ ಹಾಡುವುದು ಉಚಿತ. ಕೆಲವರಾದರೂ ನಮ್ಮ ಆಧ್ಯಾತ್ಮಿಕ ಪತ್ರಿಕೆಗಳನ್ನು ಗಂಭೀರವಾಗಿ, ಸೂಕ್ಷ್ಮವಾಗಿ ಓದುವವರಿದ್ದಾರೆ. ಅವುಗಳಲ್ಲಿ ಬರುವ ಸಂಪಾದಕೀಯದ, ಲೇಖನಗಳ ಲೋಪದೋಷಗಳನ್ನು ತಿಳಿಸಿ, ಪತ್ರ ಬರೆದು, ಸಂಪಾದಕರು ಸದಾ ಜಾಗೃತರಾಗಿ ಜವಾಬ್ದಾರಿ ನಿರ್ವಹಿಸುವಂತೆ ಮಾಡುವಂಥ ಈ ಬಗೆಯ ಓದುಗರಿಗೆ ನೂರು ನಮನಗಳು. ಇಂಥವರು ಇರುವವರೆಗೆ ಆಧ್ಯಾತ್ಮಿಕ ಪತ್ರಿಕೆಗಳೂ ಇರುತ್ತವೆ.

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮ ಕನ್ನಡದ ಧಾರ್ಮಿಕ ಸಾಹಿತ್ಯಲೋಕಕ್ಕೆ ನೀಡಿರುವ ಅಪಾರ ಕೊಡುಗೆಯನ್ನು ನಾವಿಲ್ಲಿ ಸ್ಮರಿಸಬೇಕು; ಹಾಗೆಯೇ, ಕನ್ನಡ ಪತ್ರಿಕಾಲೋಕಕ್ಕೆ ಆಧ್ಯಾತ್ಮಿಕ ಪತ್ರಿಕೆಯಾದ 'ವಿವೇಕಪ್ರಭ' ವನ್ನು ನೀಡಿರುವುದಕ್ಕೆ ಆಶ್ರಮವನ್ನು ವಿಶೇಷವಾಗಿ ನಾವು ಶ್ಲಾಘಿಸಬೇಕು. 'ಬಂಜೆ ಬೇನೆಯರಿಯಳು, ಮಲದಾಯಿ ಮುದ್ದಬಲ್ಲಳೆ?' ಎಂಬಂತೆ ಸಂಪಾದಕನಾದ ನನಗೆ ಇಂಥದೊಂದು ಪತ್ರಿಕೆಯನ್ನು ನಡೆಸುವ ಸವಾಲುಗಳ ಪೂರ್ಣ ಅರಿವಿದೆ. ಆಶ್ರಮದ ಯತಿವೃಂದಕ್ಕೆ ಓದುಗಬಳಗಕ್ಕೆ ನನ್ನ ವೈಯಕ್ತಿಕ ಅಭಿನಂದನೆಗಳು ಮತ್ತು ವಿವೇಕಹಂಸ ಬಳಗದ ಹೃತ್ಪೂರ್ವಕ ಶುಭಾಶಯಗಳು.

'ವಿವೇಕಪ್ರಭ'ಕ್ಕೆ ಹತ್ತು ವರ್ಷ ತುಂಬಿದ ಹೆಮ್ಮೆ ನಮ್ಮೆಲ್ಲರಿಗೂ. ಈ ನಿಟ್ಟಿನಲ್ಲಿ ಇಂಥದೊಂದು ಅರ್ಥಪೂರ್ಣ ವಿಚಾರಸಂಕಿರಣ ನಡೆಸಿ ನಮ್ಮ ಅನುಭವಗಳನ್ನು ಹಂಚಿಕೊಳ್ಳಲು ಅನುವು ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು. ಈ ದಿಸೆಯಲ್ಲಿ ಆಲೋಚಿಸುವಾಗ ಕನ್ನಡ ಧಾರ್ಮಿಕ ಪತ್ರಿಕೆಗಳು ಅಥವಾ ಆಧ್ಯಾತ್ಮಿಕ ಪತ್ರಿಕೆಗಳು ಒಟ್ಟಾಗಿ ಸೇರಿ ಒಂದು ಸಮ್ಮೇಳನ ನಡೆಸಬಾರದೇಕೆ ಎಂಬ ವಿಚಾರ ಗೋಚರಿಸುತ್ತದೆ. ನಮ್ಮ ನೋವು-ನಲಿವುಗಳನ್ನು ಹಂಚಿಕೊಳ್ಳಲು ಆಧ್ಯಾತ್ಮಿಕ ಪತ್ರಿಕೆಗಳದೇ ಒಂದು ವೇದಿಕೆ ನಿರ್ಮಾಣವಾಗಬೇಕು. 'ವಿವೇಕಪ್ರಭ'ದ ದಶಮಾನೋತ್ಸವದ ವಿಚಾರಸಂಕಿರಣ ಈ ನಿಟ್ಟಿನಲ್ಲಿ ನಮ್ಮ ಮೊದಲ ಹೆಜ್ಜೆ ಎಂದು ಭಾವಿಸುತ್ತೇನೆ. 'ವಿವೇಕಪ್ರಭ' ಹೀಗೆ ೨೫, ೫೦, ೧೦೦ ವಸಂತಗಳನ್ನು ದಾಟಿ ಯಶಸ್ವಿಯಾಗಿ ಮುನ್ನಡೆಯಲೆಂದು ಎಲ್ಲ ಓದುಗರ ಪರವಾಗಿ ಆಶಿಸುತ್ತೇನೆ, ಹಾಗಾಗಲೆಂದು ದಿವ್ಯತ್ರಯರಲ್ಲಿ ಪ್ರಾರ್ಥಿಸುತ್ತೇನೆ.

## ಸ್ನೇಹಪ್ರಭ

**ಸಂಘಸಂಸ್ಥೆಗಳಲ್ಲಿ ಕೆಲಸಮಾಡುವಾಗ, ಕೆಲವರು ಮಾಡುವ ಅನ್ಯಾಯವನ್ನು ನಿಲ್ಲಿಸಬೇಕು ಎಂಬ ಮನಸ್ಸು ಬರುತ್ತದೆ. ಆದರೆ ಅಸಹಾಯಕ ಸ್ಥಿತಿ. ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕು?**

ಆಂಗ್ಲಭಾಷೆಯಲ್ಲಿ ಒಂದು ಪ್ರಾರ್ಥನೆಯಿದೆ: "ಹೇ ಪ್ರಭು, ನಾನು ಯಾವುದನ್ನು ಬದಲಾಯಿಸಲಾಗುವುದಿಲ್ಲವೋ ಅದನ್ನು ಒಪ್ಪಿಕೊಳ್ಳುವ ಔದಾರ್ಯವನ್ನೂ, ಬದಲಾಯಿಸಬಹುದಾದುದನ್ನು ಬದಲಾಯಿಸುವ ಧೈರ್ಯವನ್ನೂ, ಇವೆರಡರ ನಡುವಿನ ವ್ಯತ್ಯಾಸವನ್ನು ಅರಿಯುವ ವಿವೇಕವನ್ನೂ ನನಗೆ ದಯಪಾಲಿಸು." ನಮ್ಮ ಅಸಹಾಯಕ ಸ್ಥಿತಿಯನ್ನು ನಾವು ಒಪ್ಪಿಕೊಳ್ಳಬೇಕು. ಅದಕ್ಕಾಗಿ ಭಗವಂತನ ಸಹಾಯವನ್ನು ಯಾಚಿಸಬೇಕು. ಬದುಕು ಸಂಕೀರ್ಣವಾದುದು, ಜಗತ್ತು ವಿಶಾಲವಾದುದು. ಯಾವುದೂ ನಮ್ಮ ಎಣಿಕೆಯಂತೆ ನಡೆಯುವುದಿಲ್ಲ. ನಡೆಯಬೇಕೆಂದು ನಿರೀಕ್ಷಿಸುವುದೂ ಸರಿಯಲ್ಲ. ನಮ್ಮ ಕರ್ತವ್ಯದ ಕಡೆಗೆ ನಾವು ಹೆಚ್ಚು ಗಮನ ಹರಿಸುವುದು ಒಳ್ಳೆಯದು. ಕೆಲವೊಮ್ಮೆ ಲೋಕದ ಡೊಂಕನ್ನು ತಿದ್ದಲು ಹೋಗಿ ನಾವೇ ಡೊಂಕಾಗಬಹುದು.

ಸಮಾಜಕ್ಕೆ ತನ್ನದೇ ಆದ ಗತಿ ಇದೆ. ಅದಕ್ಕೆ ತನ್ನದೇ ಆದ ನಿಯಮವಿದೆ. ಅದರ ಗತಿಯನ್ನು ನಾವು ಬದಲಾಯಿಸಲಾರೆವು. ನಾವು ಕೆಲವರಿಗೆ ಸಹಾಯ ಮಾಡಬಹುದು. ಕೆಲವು ಲೋಪದೋಷಗಳನ್ನು ತಿದ್ದಬಹುದು, ಅಷ್ಟೆ. ನಮ್ಮ ಸೀಮಿತ ವಲಯದಲ್ಲಿ ನಾವು ಎಷ್ಟು ಒಳ್ಳೆಯದನ್ನು ಮಾಡಬಹುದೋ ಅಷ್ಟನ್ನು ಮಾಡೋಣ. ಉಳಿದುದನ್ನು ದೇವರಿಗೆ ಬಿಟ್ಟುಬಿಡೋಣ. ಅವನಿಚ್ಛೆಯಂತಾಗಲಿ. ನಮ್ಮ ಕೈಲಾದುದನ್ನು ಮಾಡುವುದು, ನಮ್ಮ ಕೈಮೀರಿದ್ದನ್ನು ಭಗವಂತನಿಗೆ ಬಿಡುವುದು. ಈ ರೀತಿಯ ಶರಣಾಗತಿಯ ಭಾವವನ್ನು ಬೆಳೆಸಿಕೊಂಡರೆ ಅಸಹಾಯಕ ಭಾವ ನಮ್ಮನ್ನು ಕಾಡುವುದಿಲ್ಲ.

ಉಪ್ಪು ತಿಂದವನು ನೀರು ಕುಡಿಯಲೇ ಬೇಕು. ಅದೇ ರೀತಿ, ಅನ್ಯಾಯವನ್ನು ಮಾಡಿದ ವ್ಯಕ್ತಿ, ಅದರ ಫಲವನ್ನು ಅನುಭವಿಸಿಯೇ ತೀರುತ್ತಾನೆ. ಒಟ್ಟಿನಲ್ಲಿ ನಾವು ಅಸಹಾಯಕರು ಎಂಬ ಭಾವನೆ ನಮಗೆ ಬರಬಾರದು. ಭಗವಂತ ನಮ್ಮ ಜೊತೆ ಯಾವಾಗಲೂ ಇದ್ದಾನೆ. ಅವನ ಸಾನ್ನಿಧ್ಯವನ್ನು ಭಾವಿಸುವ ತನಕ ನಾವೆಂದೂ ಅಸಹಾಯಕರಾಗಲು ಸಾಧ್ಯವಿಲ್ಲ. (ಬರಹ: ಸ್ವಾಮಿ ನಿತ್ಯಸ್ಥಾನಂದ)